| Form No.4 (Civil)<br>Deposition Sheets<br>(R.P.No.57) |
|---|

## ವಿಶೇಷ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಯಾದಗಿರಿ

ಸ್ಪೆಷಲ್.ಸಿ. ಸಂಖ್ಯೆಃ 02/2014

ಪ್ರಾ.ಸಾ. 2 ಚಾ.ಸಾ. 2

| | |
|---|---|
| ಸಾಕ್ಷಿದಾರರ ಹೆಸರು | : ಸಂಜಿವ |
| ತಂದೆಯ ಹೆಸರು | : ಅಡಿರಪ್ಪ ಕಾರಕೋಡ |
| ವಯಸ್ಸು | 39 ವರ್ಷಗಳು |
| ಉದ್ಯೋಗ | : ಸಹಾಯ ಶಿಕ್ಷಕರು ಸ.ಹಿ.ಪ್ರಾ.ಶಾಲೆ ಕನಸಗೇರಿ ತಾಃ ಮುಧೋಳ. ಜಿಃ ಬಾಗಲಕೋಟ |
| ವಾಸ | : ಸಾಲಹಳ್ಳಿ, ತಾಃ ರಾಮದುರ್ಗ, ಜಿಃ ಬೆಳಗಾವ |

**ಪ್ರಮಾಣವಚನ ಬೋಧಿಸಿದ ದಿನಾಂಕಃ 09-09-2022**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

2008 ರಿಂದ 2011 ರವರೆಗೆ ಸ.ಹಿ.ಪ್ರಾ.ಶಾಲೆ ಭೂವಿವಾಡ ಯಾದಗಿರಿ ಎಲ್ಲಿ ಸಹಾಯ ಶಿಕ್ಷಕನಾಗಿ ಕತ್ಯರ್ವನಿರ್ವಹಿಸಿದ್ದೇನೆ.

2. ಪ್ರಾಸಾ-1 ಶಿವಶಂಕರ ಹೊಳ್ಕರ ರವರನ್ನು ಲೋ.ಪೋಲಿಸರು ಅವರ ಪೋಲಿಸ ಠಾಣೆಯಲ್ಲಿ ನನಗೆ ಪರಿಚಯ ಮಾಡಿಕೊಟ್ಟರು. ಚಾಸಾ-3 ಬಾಬುರಾವ ತಂದೆ ಚಂದೊಬಿರಾವ ಗೊತ್ತು, ದಿಃ 30.10.2010 ಬೆಃ 10.30 ಗಂಟೆಗೆ ನಾನು ನಮ್ಮ ಮೇಲಾಧಿಕಾರಿಗಳ ಸೂಚನೆ ಮೇರಗೆ ಯಾದಗಿರಿಯಲ್ಲಿ ಇರುವ ಪೋಲಿಸರ ಠಾಣೆಗೆ ಹೊದೆ. ಈಗ ತೋರಿಸಿದ ಪತ್ರ ಲೊ ಕಚೇರಿಯಿಂದ ನಮ್ಮ ಕಚೇರಿಗೆ ಬಂದಿರುವ ಪತ್ರವಾಗಿರುತ್ತದೆ. (ಪ್ರಾಸಾ-2 ರವರು ಗುರುತಿಸಿದ ದಿಃ 30.10.2010 ಸದರಿ ಪತ್ರವನ್ನು ನಿಪಿ-28 ಎಂದು ಗುರುತಿಸಲಾಯಿತು) ಅದೆ ಸಮಯದಲ್ಲಿ ಚಾಸಾ-3 ರವರು ಸಹ ಲೋಪೋಲಿಸ ಠಾಣೆಯಲ್ಲಿ ಹಾಜರಿದ್ದರು. ಆ ಸಮಯದಲ್ಲಿ ಲೊ.ಇನ್ಸಪೆಕ್ಟರ ನಮ್ಮ ಬರಮಾಡಿಕೊಂಡು ಅಲ್ಲಿ ಇದ್ದ ಫಿರ್ಯಾದುದರಾ ಶಿವಶಂಕರ ರವರನ್ನು ಪರಿಚಯ ಮಾಡಿಕೊಟ್ಟರು. ಆದೆ ಸಮಯದಲ್ಲಿ ಲೊ.ಪೋಲಿಸರು ಪ್ರಾಸಾ-1 ರವರು ನೀಡಿದ್ದ ಫಿರ್ಯಾದನ್ನು ನನಗೆ ಓದಲು ಕೊಟ್ಟರು. ಸದರಿ ಫಿರ್ಯಾದಿನ್ನು ಈ ದಿನ ನ್ಯಾಯಾಲಯದ ಮುಂದೆ ನೋಡುತ್ತಿದೇನೆ. (ಪ್ರಾಸಾ-2

ರವರು ಗುರುತಿಸಿದ ಸದರಿ ಫಿರ್ಯಾದನ್ನು ಈಗಾಗಲೇ ನಿಪಿ-01 ಎಂದು ಗುರುತಿಸಲಾಗಿದ್ದು) ನಿಪಿ-01 ರಲ್ಲಿರುವ ವಿಚಾರಗಳನ್ನು ಓದಿ ತಿಳಿದುಕೊಂಡು ಅದಕ್ಕೆ ಪಂಚನಾಗಿರಲು ಒಪ್ಪಿಕೊಂಡಿರುತ್ತೇನೆ.

3. ಆ ನಂತರ ಫಿರ್ಯಾದುದಾರರು ಸದರಿ ಪೋಲಿಸರು ನೀಡಿದಂತ ಮೊಬೈಲನಲ್ಲಿ ಇದ್ದ ವಿಚಾರಗಳನ್ನು ಸಹ ನಮಗೆ ಕೇಳಿಸಿದ್ದು ಆ ನಂತರ ಅದನ್ನು ಒಂದು ಸಿಡಿ ಮಾಡಿ ಅ ಬಗ್ಗೆ ಸಂಭಾಶನೆಯನ್ನು ಸಹ ಬರೆದುಕೊಂಡರು. ನಂತರ ಸದರಿ ಸಿಡಿಯನ್ನು ಸೀಲ್ ಮಾಡಿ ಅದಕ್ಕೆ ಡಿಎಸ್ ಎಂಬ ಅಕ್ಷರಗಳನ್ನು ಹಚ್ಚಿಸಿದರು. ಈಗ ಸದರಿ ಸಿಡಿಯನ್ನು ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. (ಪ್ರಾಸಾ-2 ರವರ ಗುರುತಿಸಿದ ಸದರಿ ಸಿಡಿಯನ್ನು ಈಗಾಗಲೇ ಮು.ಮಾ 01 ಎಂದು ಗುರುತಿಸಲಾಗಿತ್ತು) ಆ ಬಗ್ಗೆ ಪೋಲಿಸರು ಬರುದುಕೊಂಡಂದತ ಸಂಭಾಶನೆಯನ್ನು ಈ ದಿನ ನ್ಯಾಯಾಲಯದ ಮುಂದೆ ಗುರುತಿಸುತ್ತಿದ್ದೇನೆ. (ಪ್ರಾಸಾ-2 ರವರ ಗುರುತಿಸಿದ ಸದರಿ ಸಂಬಾಶೆಯ ಹೇಳಿಕೆಯನ್ನು ಈಗಾಗಲೇ ನಿಪಿ-24 ಎಂದು ಗುರುತಿಸಲಾಗಿದ್ದು ಈ ದಿನ ಅದರಲ್ಲಿರುವ ಪ್ರಾಸಾ-2 ರವರ ಸಹಿಯನ್ನು ನಿಪಿ-24 (ಎ) ಎಂದು ಗುರುತಿಸಲಾಯಿತು)

4. ಆದೆ ದಿನದಂದು ಸದರಿ ಪೋಲಿಸರು ಫಿರ್ಯಾದಾರರನ್ನು 25,000 ರೂಗಳನ್ನು ಹಾಜರು ಪಡಿಸಿದು ಕೇಳಿದಾಗ ಪ್ರಾಸಾ-1 ರವರು 1000 ಮುಖ ಬೆಲೆಯ 25 ನೊಟುಗಳನ್ನು ಹಾಜರು ಪಡಿಸಿದಾಗ ಅದನ್ನು ಚಾಸಾ-8 ಕಾಶಿನಾಥ ರವರ ಮುಖಾಂತರ ಚಾಸಾ-3 ಬಾಬುರಾವ ರವರ ಕೈಯಲ್ಲಿ ನೀಡಿದರು. ಅವುಗಳನ್ನು ಚಾಸಾ-3 ರವರು ಎಣಿಸಿ ಅದರ ಮುಖ ಬೆಲೆ ಹಾಗೂ ನಂಬರಗಳನ್ನು ನನಗೆ ತಿಳಿಸಿದ ಮೇರೆಗೆ ನಾನು ಅವುಗಳನ್ನು ಒಂದು ಬಿಳಿ ಹಾಳಿಯಲ್ಲಿ ಬರೆದುಕೊಂಡಿರುತ್ತೇನೆ. ಈಗ ಸದರಿ ನೊಟುಗಳ ವಿವರಗಳಿರುವ ಬಿಳಿಹಾಳಿಯನ್ನು ನ್ಯಾಯಾಲಯ ಮುಂದೆ ಗುರುತಿಸುತ್ತಿದ್ದೇನೆ. (ಪ್ರಾಸಾ-2 ರವರು ಗುರುತಿಸಿದ ಬಿಳಿಹಾಳಿಯನ್ನು ಈ ದಿನ ನಿಪಿ-23 ಅದರಲ್ಲಿ ರುವ ಪ್ರಾಸಾ-2 ರವರ ಸಹಿಯನ್ನು ನಿಪಿ-23 (ಎ) ಎಂದು ಗುರುತಿಸಲಾಯಿತು). ಆದೆ ಸಮಯದಲ್ಲಿ ಸದರಿ ಪೋಲಿಸರು ಫಿನಾಪ್ತಲಿನ ಹಾಗೂ ಸೋಡಿಯಂ ಕಾರ್ಬೋನೆಟ ಪೌಡರ ಇರುವ ಎರಡು ಪ್ರತ್ಯೆವಾದ ಪ್ಲಾಸ್ಟಿಕ ಡಬ್ಬೆಗಳನ್ನು ತೋರಿಸಿದರು ಹಾಗೂ ಸದರಿ ಫಿನಾಫಲಿನ ಪೌಡರನ್ನು ಯಾವುದೂ ವಸ್ತುವಿಗೆ ಹಾಕಿಸಿ ನೀರಿನಲ್ಲಿ ಅದ್ದಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗುತ್ತದೆ ಎಂದು ತಿಳಿಸಿದರು. ಆ ನಂತರ ಸದರಿ

ಪೋಲಿಸರು ಫಿರ್ಯಾದುದಾರನು ನೀಡಿದದ 1000 ರೂಗಳು ಇರುವ 25 ನೊಟುಗಳಿಗೆ ಫಿನಾಫ್ತಲಿನ ಪೌಡರನ್ನು ಹಚ್ಚಿ ಅದನ್ನು ಚಾಸಾ-3 ರವರು ನೀಡಿದರು. ಆಗ ಚಾಸಾ-3 ರವರು ಪ್ರಾಸಾ-1 ರವರ ಪ್ಯಾಂಟಿನ ಬೇಬಿನಲ್ಲಿ ಯಾವುದೇ ವಸ್ತುಗಳು ಇಲ್ಲದೆ ಇರುವುದನ್ನು ಖಚಿತಪಡಿಸಿಕೊಂಡು ಪ್ರಾಸಾ-1 ರವರ ಪ್ಯಾಂಟಿನ ಬಲ ಜೇಬಿಗೆ ಫಿನಾಫ್ತಲಿನ ಪೌಡನ ಹಚ್ಚಿದ ಸದರಿ ನೊಟುಗಳನ್ನು ಇಟ್ಟರು. ಆ ನಂತರ ಚಾಸಾ-3 ಬಾಬುರಾವ ರವರ ಕೈಗಳನ್ನು ಸೊಡಿಯಂ ಕಾರ್ಬೊನೆಟ ಇದ್ದಂತಹ ನೀರಿನು ಗಾಜಿನ ಬಾಟಲಲ್ಲಿ ಬೆರೆಸಿದಾಗ ಸದರಿ ನೀರು ಗುಲಾಬಿ ಬಣಕ್ಕೆ ತಿರುಗಿತಿ. ಸದರಿ ಗುಲಾಬಿ ಬಣಕ್ಕೆ ತಿರುಗಿತಿ ನೀರನ್ನು ಸದರಿ ಬಟಲಿನಿಂದ ಒಂದು ಸಣ್ಣ ಬಾಟಲಿಗೆ ತುಂಬಿಸಿ ಅದನ್ನು ಸೀಲ್ ಮಾಡಿ ಅದಕ್ಕೆ ಡಿಎಸ್ ಎಂಬ ಅಕ್ಷಕರಗಳಿಂದ ಹಚ್ಚಿದರು.

5. ಆ ನಂತರ ಆದೇ ದಿನದಂದು ಸದರಿ ಪೋಲಿಸರು ನನಗೆ ಹಾಗೂ ಚಾಸಾ-3 ರವರನ್ನು ಫಿರ್ಯಾದುದಾರರ ಜೊತೆ ಯಾದಗಿರಿ ಅಲ್ಲಿ ಇರುವ ಎ.ಸಿ ಕಚೇರಿಯಲ್ಲಿರುವ ವ್ಯವಾಸ್ಥಪಕರಾದ ಗುರುಪಾದಪ್ಪ ರವರ ಕೊಠಡಿಗೆ ಹೊಗುವಂತೆ ತಿಳಿಸಿದರು. ಹಾಗೂ ಸದರಿ ಕಚೆರೀಯಲ್ಲಿ ಗುರುಪಾದಪ್ಪ ಫಿರ್ಯಾದಾನಿಂದ 25000 ರೂಗಳನ್ನು ಪಡೆದುಕೊಂಡಲ್ಲಿ ನಮ್ಮನ್ನು ಸದರಿ ಕೊಠಡಿಯಿಂದ ಹೊರೆಗೆ ಬಂದು ಫಿರ್ಯಾದಾರರು ತನ್ನ ಗಡ್ಡದ ಕೂದಲ ಕೈಮಾಡಿ ಸಣ್ಣೆಯನ್ನು ನೀಡುವಂತೆ ತಿಳಿಸಿದರು ಹಾಗೂ ಫಿರ್ಯಾದುದದರರ ಹಾಗೂ ಸದರಿ ಗುರುಪಾದಪ್ಪ ರವರ ನಡುವೆ ಅಗುವ ಸಂಭಾಶನೆಯ ಧ್ವನಿ ಮುದ್ರಣ ಮಾಡಿಕೊಳ್ಳಲು ಒಂದು ವಾಯಿಸರೇಕಾರ್ಡನ್ನು ಫಿರ್ಯಾದುದಾರನಿಗೆ ನೀಡಿದರು. ಆ ಬಗ್ಗೆ ಫೊಟೂಗಳನ್ನು ಸಹ ಲೊ.ಕಚೇರಿಯಲ್ಲಿ ಪಡೆದುಕೊಂಡರು. ಸದರಿ ಫೊಟೂಗಳನ್ನು ನಾನು ಈ ದಿನ ನ್ಯಾಯಾಲಯದ ಮುಂದೆ ಗುರುತಿಸುತ್ತಿದ್ದೇನೆ. (ಪ್ರಾಸಾ-2 ರವರು ಗುರುತಿಸಿದ ಸದರಿ ಫೊಟೊಗಳನ್ನು ಈಗಾಗಲೆ ನಿಪಿ-03 ರಿಂದ 22 ಎಂದು ಗುರುತಿಸಲಾಗಿದ್ದು). ಈ ಪ್ರಕ್ರಿಯ ಕೈಗೊಂಡು ಮುಗಿಸುವ ಕಾಲಕ್ಕೆ ಸಮಯ ಬೆಃ 10.30 ರಿಂದ 01.30 ಗಂಟೆಯ ಆಗಿತ್ತು. ಆ ಕಾಲಕ್ಕೆ ಸದರಿ ಪೋಲಿಸರು ಪಂಚನಾಮೆಯನ್ನು ಮಾಡಿ ನಮ್ಮಿಂದ ಸಹಿಗಳನ್ನು ಪಡೆದರು. ಸದರಿ ಪಂಚನಾಮೆಯನ್ನು ಈ ದಿನ ನ್ಯಾಯಾಲಯದ ಮುಂದೆ ಗುರುತಿಸುತ್ತಿದ್ದೇನೆ. ಅದರಲ್ಲಿ ನನ್ನ ಸಹಿ ಇದೆ. (ಪ್ರಾಸಾ-2

ರವರು ಗುರುತಿಸಿದ ಸದರಿ ದಾಖಲೆಯನ್ನು ಈಗಾಗಲೆ ನಿಪಿ-02 ಎಂದು ಗುರುತಿಸಲಾಗಿದ್ದು ಈ ದಿನ ಪ್ರಾಸಾ-2 ರವರ ಸಹಿಯನ್ನು ನಿಪಿ-02 (ಬಿ) ಎಂದು ಗುರುತಿಸಲಾಯಿತು.)

6. ನಂತರ ಅದೆ ದಿನದಂದು ನಾನು ಪ್ರಾಸಾ-1 ರವರು ಜೊತೆಗೆ ಮ ಸುಮಾರು 03.00 ಗಂಟೆಗೆ ಸದರಿ ಗುರಪಾದಪ್ಪ ರವರ ಕೊಠಡಿಗೆ ಹೋದೆವು. ಆದೆ ಸಮಯದಲ್ಲಿ ಲೊ.ಸಿಬ್ಬಂಧಿಯರು ಹಾಗೂ ಚಾಸಾ-3 ರವರು ಪ್ರತ್ಯೆಕವಾಗಿ ಸದರಿ ಸ್ಥಳಕ್ಕೆ ಬಂದು ಕಚೇರಿಯ ಹೊರಗೆ ಕಾಯುತ್ತಿದ್ದರು.

7. ಆ ನಂತರ ನಾನು ಮತ್ತು ಪ್ರಾಸಾ-1 ರವರು ಸದರಿ ಗುರುಪಾದಪ್ಪ ರವರ ಕೊಠಡಿಗೆ ಹೋದಾಗ ಪ್ರಾಸಾ-1 ರವರು ಸದರಿ ಗುರುಪಾದಪ್ಪನ್ನು ತನ್ನ ಕೆಲಸ ಆಯಿತ ಎಂದು ಕೇಳಿದರು. ಆಗ ಸದರಿ ಗುರುಪಾದಪ್ಪ ಪ್ರಾಸಾ-1 ರವರಿಗೆ ಜಿಲ್ಲಾಧಿಕಾರಿಗಳ ಕಚೇರಿಯಿಂದ ಅವರ ಕಡತ ಬಂದಿಲ್ಲವೆಂದು ಇನ್ನು ಎರಡು ಅಥವಾ ಮೂರು ದಿನ ಒಳಗಾಗಿ ಸದರಿ ಕಡತ ತಮ್ಮಲ್ಲಿಗೆ ಬರುವುದಾಗಿ ತಿಳಿಸಿದರು. ಆ ನಂತರ ನಾವು ಸದರಿ ಕೊಠಡಿಯಿಂದ ವಾಪಸ್ಸು ಬಂದೆವು. ಆ ನಂತರ ಲೊ. ಪಿಐ ರವರು ಫಿರ್ಯಾದುದಾರಿಗೆ ಫೊನ್ ಮಾಡಿ ಅವುರು ಇದ್ದತಂಹ ಸ್ಥಳಕ್ಕೆ ಕರೆಯಿಸಿಕೊಂಡ ಫಿರ್ಯಾದುದಾರ ಕಡೆಯಿಂದ 2ನೇ ಆರೋಪಿಯಾದ ಸಿದ್ದಯ್ಯ ರವರಿಗೆ ಫೂನ್ ಮಾಡಿ ಅಂತಾ ತಿಳಿಸಿದರು. ಆಗ ಫಿರ್ಯಾದುದಾರರು 2ನೇ ಆರೋಪಿಗೆ ಫೊನ್ ಮಾಡಿ ತಾನು 1ನೇ ಆರೋಪಿಯಾದ ಗುರುಪಾದಪ್ಪ ರವರ ಕೊಠಡಿಗೆ ಹೋದಾಗ ಗುರುಪಾದಪ್ಪ ತನ್ನ ಕಚೇರಿಗೆ ಇನ್ನು ಕಡತ ಬಂದಿಲ್ಲವೆಂದು ಇನ್ನ ಎರಡು ಅಥವಾ ಮೂರು ದಿನಗಳ ನಂತರ ಬರುವಂತೆ ತಿಳಿಸಿದರು ಎಂದು ಹೇಳಿದರು. ಜೊತೆಗೆ ಫಿರ್ಯಾದಾರರು ತಮ್ಮಂದಿಗೆ 25000 ರೂಗಳನ್ನು ತೆಗೆದುಕೊಂಡು ಹೋಗಿದ್ದಾಗಿ ಸಹ ತಿಳಿಸಿದರು. ಆಗ 2ನೇ ಆರೋಪಿ ಫಿರ್ಯಾದಾರರಿಗೆ ಸದರಿ ಹಣವನ್ನು ತಗೆದುಕೊಂಡು ಮತ್ತೊಂಮೆ 1ನಲ ಆರೋಪಿ ಕೊಠಡಿಗೆ ಹೋಗುವಂತ ಹಾಗೂ 2ನೇ ಅರೋಪಿ 1ನೇ ಆರಲೂಪಿ ಆ ಬಗ್ಗೆ ತಿಳಿಸಿದಾಗಿ ಹೇಳಿದರು.

8. ಅದರಂತೆ ಪುನಃ ನಾವು ಸಂಜೆ 04.00 ಗಂಟೆಯ ಸಮಯಕ್ಕೆ 1ನೇ ಆರೋಪಿ ಗುರುಪಾದಪ್ಪ ರವರ ಕಚೇರಿಯ ಕೊಠಡಿಗೆ ಹೋದೆವು. ಆದರೂ ಸಹ 1ನೇ ಆರೋಪಿ ನಮ್ಮಿಂದಿ

ಹಣವನ್ನು ಪಡೆಯದೆ ಇನ್ನು ಎರಡು ಅಥವಾ ಮೂರು ದಿನ ನಂತರ ಕಡತ ತನ್ನಲ್ಲಿಗೆ ಬರುವುದಾಗಿ ಆ ನಂತರ ಫಿರ್ಯಾದಾರರು ಬರಲು ತಿಳಿಸಿದರು. ನಾವು ಲೋ. ಕಚೇರಿಗೆ ಹೋದಾಗ ಸಮಯ ಸಂಜೆ 05.00 ಗಂಟೆ ಆಗಿತ್ತು. ಈ ಎಲ್ಲಾ ಘಟನೆ ಬಗ್ಗೆ ನಾವು ಪೋಲಿಸ ಠಾಣೆಯಲ್ಲಿ ಇದ್ದ ಪಿಐ ರವರಿಗೆ ತಿಳಿಸಿದ್ದೇವು. ಆ ನಂತರ ಫಿರ್ಯಾದುದಾರರು 1ನೇ ಆರೋಪಿಯ ಕಚೇರಿಯಲ್ಲಿ ಮಾತನಾಡಿದ್ದ ಬಗ್ಗೆ ಹಾಗೂ 2ನೇ ಆರೋಪಿಯೊಂದಿಗೆ ಫೋನ್‌ದಲ್ಲಿ ಮಾತನಾರಿದ್ದ ಬಗ್ಗೆ ಅವುಗಳ ಸಂಭಾಶೆನೆಯನ್ನು ಲೊ. ಪಿಐ ರವರಿಗೆ ನೀಡಿದ್ದು ಅವುಗಳನ್ನು ಲೊ.ಪಿಐ ರವರು ಸಿಡಿಯ ಮುಖಾಂತರ ಪಡೆದುಕೊಂಡರು. ಸದರಿ ಸಂಭಾಶೆನೆಯಾದ ಬಗ್ಗೆ ನಾನು ನನ್ನ ಕೈಬರಹದಿಂದ ಬಿಳಿ ಹಾಳಿಯ ಮೇಲೆ ಬರೆದು ಸಹಿ ಮಾಡಿರುತ್ತೇನೆ. (ಪ್ರಾಸಾ-2 ರವರು ಗುರುತಿಸಿದ ಎರಡು ಪ್ರತ್ಯೆವಾದ ಬರವಣಿಗೆಗಳನ್ನು ಈಗಾಗಲೇ ನಿಪಿ-26 ಮತ್ತು 27 ಎಂದು ಗುರುತಿಸಲಾಗಿದ್ದು ಈ ದಿನ ಅದರಲ್ಲಿರುವ ಪ್ರಾಸಾ-2 ರವರ ಸಹಿಗಳನ್ನು ನಿಪಿ-26 (ಎ) ಮತ್ತು ನಿಪಿ-27 (ಎ) ಎಂದು ಗುರುತಿಸಲಾಯಿತು)

9. ಆ ನಂತರ ಅದೆದಿನದಂದು ಲೊ.ಕೆಚೇರಿಯಲ್ಲಿ ಫಿರ್ಯಾದಾರರಿಂದ ಅವರಿಗೆ ನೀಡಿದ್ದ 250000ರೂಗಳನ್ನು ವಾಪಸ್ಸು ಪಡೆದು ಅದ ಕಾಲೆಯನ್ನು ಖಚೀತ ಪಡಿಸಿಕೊಂಡು ಆ ನಂತರ ಸದರಿ ಹಣವನ್ನು ವಾಪಸ್ಸು ಫಿರ್ಯಾದುದಾರಿಗೆ ನೀಡಿದ್ದರು. ಆದೆ ಸಮಯದಲ್ಲಿ ಸದರಿ ಪೋಲಿಸರು ಫಿರ್ಯಾದಾರರಿಗೆ ಸದರಿ ಹಣವನ್ನು ತೆಗೆದುಕೊಂಡು ಹೋಗುವಂತೆ ಹಾಗೂ ಪುನಃ ಆ ವಿಚಾರದಲ್ಲಿ ಆರೋಪಿತರು ಏನಾದರೂ ಹಣ ಕೊರಿದಲ್ಲಿ ತಮ್ಮ ಕಚೆರೀಗೆ ಬರುವಂತೆ ತಿಳಿಸಿದರು. ಸದರಿ ವಿಚಾರದಲ್ಲಿ ಆ ಕಾಲಕ್ಕೆ ಒಂದು ಪಂಚನಾಮೆಯನ್ನು ಮಾಡಿದ್ದರು. ಸದರಿ ಪಂಚನಾಮೆಯನ್ನು ಈ ದಿನ ನ್ಯಾಯಾಲಯದ ಮುಂದೆ ಗುರುತಿಸುತ್ತಿದ್ದೇನೆ ಅದರಲ್ಲಿ ನನ್ನ ಸಹಿ ಇದೆ. (ಪ್ರಾಸಾ-2 ರವರು ಗುರುತಿಸಿದ ಪಂಚನಾಮಯನ್ನು ಈಗಾಗಲೆ ನಿಪಿ-25 ಎಂದು ಗುರುತಿಸಲಾಗಿದ್ದು ಈ ದಿನ ಪ್ರಾಸಾ-2 ರವರ ಸಹಿಯನ್ನು ನಿಪಿ-25 (ಎ) ಎಂದು ಗುರುತಿಸಲಾಯಿತು). ಸದರಿ ವಿಚಾರದಲ್ಲಿ ನಾನು ಸದರಿ ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಸ್‌ಎಂಪಿವಾಯ ರವರು ಶ್ರೀ ಬಿಆರ್‌ಎಂ ರವರ ಪರವಾಗಿ ಪಾಟೀ ಸವಾಲಿಗಾಗಿ ಕಾಲವಕಾಶ ಕೋರಿರುತ್ತಾರೆ. ಕಾಲವಕಾಶ ನೀಡಲಾಗಿದೆ. ಆದ ಕಾರಣ ಪ್ರಾಸಾ-2 ರವರ ಪಾಟೀ ಸವಾಲನ್ನು ಮುಂದೂಡಲಾಗಿದೆ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ.

ವಿಶೇಷ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.

This document was created with the Win2PDF “print to PDF” printer available at
http://www.win2pdf.com

This version of Win2PDF 10 is for evaluation and non-commercial use only.

This page will not be added after purchasing Win2PDF.

http://www.win2pdf.com/purchase/